SHRIDHARA H D

Digitally signed by SHRIDHARA H D
Date: 2026.04.03 19:44:37 +0530

KACD320015272023

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್ ಸಿ ರವರ
ನ್ಯಾಯಾಲಯ, ಹಿರಿಯೂರು

ಉಪಸ್ಥಿತರು: ಶ್ರೀ. ಶ್ರೀಧರ ಹೆಚ್ ಡಿ
ಬಿ.ಎ., ಎಲ್.ಎಲ್.ಬಿ.
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್ ಸಿ, ಹಿರಿಯೂರು,.

**ಸಿ.ಸಿ. ನಂ.715 / 2023**

**ದಿನಾಂಕ 02 ನೇ ಏಪ್ರಿಲ್ 2026**

ಪಿರ್ಯಾದುದಾರರು: ಅಬ್ಬಿನಹೊಳೆ ಪೊಲೀಸ್ ಠಾಣೆ
ಸಹಾಯಕ ಅರಕ್ಷಕ ಉಪ-ನಿರೀಕ್ಷಕರು

(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತ/ರು : 1) ರಮೇಶ ಬಿನ್ ಪಾತಲಿಂಗಪ್ಪ
ವಯಸ್ಸು ಸುಮಾರು 32 ವರ್ಷ

2) ಪಾತಣ್ಣ ಬಿನ್ ಪಾತಪ್ಪ,
ವಯಸ್ಸು ಸುಮಾರು 69 ವರ್ಷ

3) ಹನುಮಂತಮ್ಮ ಕೋಂ ಪಾತಪ್ಪ,
ವಯಸ್ಸು ಸುಮಾರು 60 ವರ್ಷ

4) ಲಕ್ಷ್ಮಿದೇವಿ ಕೋಂ ರಾಘವೇಂದ್ರ,
ವಯಸ್ಸು ಸುಮಾರು 33 ವರ್ಷ

5)ರಾಘವೇಂದ್ರ.ಪಿ ಬಿನ್ ಪಾತಲಿಂಗಪ್ಪ,
ವಯಸ್ಸು ಸುಮಾರು 35 ವರ್ಷ

6) ಕುಮಾರ ಬಿನ್ ಪಾತಲಿಂಗಪ್ಪ,
ವಯಸ್ಸು ಸುಮಾರು 33 ವರ್ಷ,

7) ಬಂಗಾರಮ್ಮ ಕೋಂ ಪಾತಲಿಂಗಪ್ಪ,
ವಯಸ್ಸು ಸುಮಾರು 54 ವರ್ಷ,

8) ಪಾತಲಿಂಗಪ್ಪ ಬಿನ್ ಕರೆ ಪಾತಪ್ಪ,
ವಯಸ್ಸು ಸುಮಾರು 64 ವರ್ಷ,

ಎಲ್ಲರ ವಾಸಃ ಶಿವಗಂಗ ಗ್ರಾಮ,
ಹಿರಿಯೂರು ತಾಲ್ಲೂಕು,
**(ಶ್ರೀ. ವೈ. ಆರ್. ಕೆ., ವಕೀಲರು).**

| | | | |
|---|---|---|---|
| 01 | ಅಪರಾಧವು ಘಟಿಸಿದ ದಿನಾಂಕ | :- | 11.02.2023 |
| 02 | ಅಪರಾಧವನ್ನು ವರದಿ ಮಾಡಿದ ದಿನಾಂಕ | :- | 11.02.2023 |
| 03 | ದೂರುದಾರನ ಹೆಸರು | :- | ಮಹಲಿಂಗಪ್ಪ ಬಿನ್ ನಿಂಗಪ್ಪ |
| 04 | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | :- | 24.10.2024 |
| 05 | ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ | :- | 21.01.2026 |
| 06 | ಅಪರಾಧಗಳ ಕಲಂ ಗಳು | :- | ಭಾ. ದಂ. ಸಂ. ಕಲಂಃ143, 147, 148, 504, 323, 324, 354B ಮತ್ತು 506 ಸಹಕಲಂ 149 |
| 07 | ನ್ಯಾಯಾಧೀಶರ ಅಂತಿಮ ನಿರ್ಣಯ | :- | **ಖುಲಾಸೆ ಮಾಡಲಾಗಿದೆ** |

SHRIDHARA H D
Digitally signed by SHRIDHARA H D
Date: 2026.04.03 19:44:46 +0530

**(ಶ್ರೀಧರ ಹೆಚ್ ಡಿ)**
ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.

:– ತೀರ್ಪು –:

ಹಿರಿಯೂರು ತಾಲ್ಲೂಕು, ಅಬ್ಬಿನಹೊಳೆ ಪೋಲೀಸ್ ಠಾಣೆಯ ಸಹಾಯಕ ಅರಕ್ಷಕ ಉಪ–ನಿರೀಕ್ಷಕರು ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ143, 147, 148, 504, 323, 324, 354B ಮತ್ತು 506 ಸಹಕಲಂ 149 ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. <u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ–</u>**

ದಿನಾಂಕ:11–02–2023 ರಂದು ರಾತ್ರಿ ಸುಮಾರು 8.20 ಗಂಟೆಯ ಸಮಯದಲ್ಲಿ ಹಿರಿಯೂರು ತಾಲ್ಲೂಕ್ ಶಿವಗಂಗಾ ಗ್ರಾಮದ ಸಾಕ್ಷಿ–01 ರಿಂದ 04 ರವರು ತಮ ಮನೆಯ ಬಳಿಯಿರುವಾಗ 1 ರಿಂದ 8 ನೇ ಆರೋಪಿತರು ಸಾಕ್ಷಿ–1 ರವರ ಜಾಗದಲ್ಲಿ ಗುಂಡಿ ತೆಗೆದು ಬಂಡೆ ನಡುತ್ತಿದ್ದು, ಇದನ್ನು ನೋಡಿದ ಸಾಕ್ಷಿ–1 ರವರು ನಮ್ಮ ಜಾಗದಲ್ಲಿ ಯಾಕೇ ಗುಂಡಿ ತೆಗೆದು ಬಂಡೆ ನೆಡುತ್ತಿದ್ದರೆಂದು ಕೇಳಿದ್ದಕ್ಕೆ 1 ರಿಂದ 8 ನೇ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಸಾಕ್ಷಿ–1 ರವರ ಮನೆಯ ಹತ್ತಿರ ಬಂದು ಜಗಳ ತೆಗೆದು ಬರ್ರೋ ಸೂಳೇ ಮಕ್ಕಳಾ, ಬೋಳಿ ಮಕ್ಕಳ, ಮನೆಯ ಪಕ್ಕದ ಜಾಗವನ್ನು ಬಿಟ್ಟು ಕೊಡುತ್ತೀರೋ ಇಲ್ಲವೋ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದಲ್ಲದೇ, 1 ನೇ ಆರೋಪಿತನು ಹಾರೇ ಕೋಲನ್ನು ತೆಗೆದುಕೊಂಡು ಸಾಕ್ಷಿ–1 ರವರ ತಲೆಯ ಬಳಿ ಹೊಡೆದು ರಕ್ತಗಾಯಪಡಿ ಸಾಮಾನ್ಯ ಸ್ವರೂಪದ ಗಾಯವನ್ನುಂಟುಮಾಡಿರುತ್ತನೆ ಮತ್ತು ಗಲಾಟೆ ಬಿಡಿಸಲು ಬಂದು ಸಾಕ್ಷಿ–2 ರವರು ಧರಿಸಿದ ಸೀರೆ ಮತ್ತು ಜಾಕಿಟ್ ನ್ನು 1 ನೇ ಆರೋಪಿತನು ಎಳೆದು ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು–ಮಾಡಿರುತ್ತನೆ, ಗಲಾಟೆ ಬಿಡಿಸಲು ಬಂದ ಸಾಕ್ಷಿ–3 ಮತ್ತು 4 ರವರಿಗೆ 2 ರಿಂದ

8 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಾಡಿ ಕೈಕಾಲುಗಳಿಂದ ಹೊಡೆದು ಸಾಮಾನ, ಸ್ವರೂಪದ ಗಾಯವನ್ನುಂಟುಮಾಡಿದ್ದಲ್ಲದೇ ಎಲ್ಲರು ಹೋಗುವಾಗ ಈ ಜಾಗವನ್ನು ನಮಗೆ ಬಿಟ್ಟು ಕೊಡದೆ ಇದ್ದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂಬುದಾಗಿರುತ್ತದೆ.

**3.** ಚಾಸಾ-1- ರವರು ನೀಡಿದ ದೂರಿನ ಆಧಾರದ ಮೇಲೆ ಅಬ್ಬಿನಹೊಳೆ ಪೋಲೀಸರು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ:24/2023 ರಲ್ಲಿ ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂ:143, 147, 148, 504, 323, 324, 354B ಮತ್ತು 506 ಸಹಕಲಂ 149 ರಡಿಯಲ್ಲಿ ಪ್ರಕರಣ ದಾಖಲು ಮಾಡಿ ಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುವುದಾಗಿದೆ.

**4.** ತನಿಖಾಧಿಕಾರಿಯು ಪ್ರಕರಣದ ತನಿಖೆ ಮುಕ್ತಾಯದ ನಂತರ ಆರೋಪಿತರ ವಿರುದ್ದ ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂ:143, 147, 148, 504, 323, 324, 354B ಮತ್ತು 506 ಸಹಕಲಂ 149 ರಡಿಯಲ್ಲಿ9 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಅದನ್ನು ಪರಿಶೀಲಿಸಿ, ಸದರಿ ಕಲಂಗಳ ಅಡಿಯಲ್ಲಿನ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡು ರಿಜಿಸ್ಟರ್ ನಂ.3 ರಲ್ಲಿ ಪ್ರಕರಣವನ್ನು ನೊಂದಾಯಿಸಿ 1 ರಿಂದ 8 ನೇ ಆರೋಪಿತರುಗಳಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಲಾಗಿ ಆರೋಪಿತರುಗಳು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ.

**5.** ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿತರಿಗೆ ನೀಡಿ, ನಂತರ ಆರೋಪಿತರ ಪರ

ವಕೀಲರು ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರ ವಾದ ಆಲಿಸಿ, ಆರೋಪಿತರುಗಳ ವಿರುದ್ದ ಆರೋಪಿತರ ವಿರುದ್ಧ ಭಾ. ದಂ. ಸಂ. ಕಲಂಃ143, 147, 148, 504, 323, 324, 354B ಮತ್ತು 506 ಸಹಕಲಂ 149 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತರುಗಳಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ ವಿವರಿಸಲಾಯಿತು, ಆರೋಪಿತರು ತಮ್ಮ ವಿರುದ್ದದ ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆ ಆಗಬೇಕೆಂದು ಕೇಳಿ ಕೊಂಡಿರುತ್ತಾರೆ.

**6.** 1 ರಿಂದ 8 ನೇ ಆರೋಪಿತರುಗಳ ಮೇಲಿನ ಆರೋಪವನ್ನು ಸಾಭೀತು ಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 12 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 12 ರಂತೆ ವಿಚಾರಣೆಗೆ ಒಳಪಡಿಸಿಕೊಂಡು, ಒಟ್ಟು 19 ದಾಖಲಾತಿಗಳನ್ನು ನಿಪಿ-1 ರಿಂದ 19 ಹಾಗೂ ಮು. ಮಾ-1 ಮತ್ತು 2 ರಂತೆ ಗುರುತಿಸಿಕೊಂಡಿರುತ್ತದೆ.

**7.** ಅಭಿಯೋಜನೆಯ ಸಾಕ್ಷ್ಯ ವಿಚಾರಣೆ ಮುಕ್ತಾಯದ ನಂತರ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿತರುಗಳ ಹೇಳಿಕೆಯನ್ನು ದಾಖಲು ಮಾಡಿ ಕೊಳ್ಳಲಾಯಿತು. ಆರೋಪಿತರುಗಳು ತಮ್ಮ ವಿರುದ್ಧದ ಅಭಿಯೋಜನೆಯ ಸಾಕ್ಷ್ಯವನ್ನು ಸ್ಪಷ್ಟವಾಗಿ ಅಲ್ಲಗಳೆದು, ತಮ್ಮ ಪರವಾಗಿ ಪ್ರತಿವಾದ ಸಾಕ್ಷ್ಯ ಮಂಡಿಸುವುದಿಲ್ಲ ಎಂದಿರುತ್ತಾರೆ .

**8.** ಪ್ರಕರಣದಲ್ಲಿ ಉಭಯ ಪಕ್ಷಕಾರರ ವಾದ ಆಲಿಸಿ, ಕಡತ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ.

**: ಅಂಶಗಳು :**

1. ದಿನಾಂಕ:11-02-2023 ರಂದು ರಾತ್ರಿ ಸುಮಾರು 8.20 ಗಂಟೆಯ ಸಮಯದಲ್ಲಿ ಶಿವಗಂಗಾ ಗ್ರಾಮದ ಸಾಕ್ಷಿ-1 ರಿಂದ 04 ರವರು ತಮ ಮನೆಯ ಬಳಿಯಿರುವಾಗ 1 ರಿಂದ 8 ನೇ ಆರೋಪಿತರು ಸಮಾನ ಉದ್ದೇಶ ಹೊಂದಿ, ಸಾಕ್ಷಿ-1 ರಿಂದ 4 ರವರ ಮೇಲೆ ಹಲ್ಲೆ ಮಾಡುವ ಉದ್ದೇಶ ದಿಂದ ಅಕ್ರಮವಾಗಿ ಗುಂಪು ಕಟ್ಟಿ ಕೊಂಡು ಅಕ್ರಮ ಕೂಟ ರಚನೆ ಮಾಡುವ ಮೂಲಕ ಭಾ ದಂ ಸಂ ಕಲಂ 143 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಅಕ್ರಮ ಕೂಟದ ಸದಸ್ಯರಾಗಿದ್ದು ಮತ್ತು ಅಕ್ರಮಕೂಟದ ಸಮಾನ ಉದ್ದೇಶವನ್ನು ಈಡೇರಿಸುವ ಸಲುವಾಗಿ ಸಾಕ್ಷಿ-1 ರಿಂದ 4 ರವರಿಗೆ ಹೊಡೆದು ದೊಂಬಿ ಮಾಡುವ ಮೂಲಕ ಭಾ ದಂ ಸಂ ಕಲಂ 147 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾ ತೀತವಾಗಿ ಸಾಭೀತು ಪಡಿಸುತ್ತದೆಯೇ?

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಅಕ್ರಮವಾಗಿ ಗುಂಪುಕಟ್ಟಿ ಕೊಂಡು ಕೈಗಳಲ್ಲಿ ಮಾರಾಕಾಯಧತವಾದ ಹಾರೇ ಕೋಲನ್ನು ಹಿಡಿದುಕೊಂಡು ಬಂದು ದೊಂಬಿ

ಎಬ್ಬಿಸಿ, ಆ ಮೂಲಕ ಭಾ ದಂ ಸಂ ಕಲಂ 148 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಆಕ್ರಮವಾಗಿ ಗುಂಪುಕಟ್ಟಿ ಕೊಂಡು ಬಂದು ದೊಂಬಿ ಮಾಡಿ, ಆರೋಪಿತರೆಲ್ಲರೂ ಅಕ್ರಮ ಗುಂಪು ಕಟ್ಟಿಕೊಂಡು ಸಾಕ್ಷಿ-1 ರವರ ಮನೆಯ ಹತ್ತಿರ ಬಂದು ಜಗಳ ತೆಗೆದು ಬರ್ರೋ ಸೂಳೇ ಮಕ್ಕಳಾ, ಬೋಳಿ ಮಕ್ಕಳ, ಮನೆಯ ಪಕ್ಕದ ಜಾಗವನ್ನು ಬಿಟ್ಟು ಕೊಡುತ್ತೀರೋ ಇಲ್ಲವೋ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಾಡುವ ಮೂಲಕ ಭಾ ದಂ ಸಂ ಕಲಂ 504 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

5. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಆಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ದೊಂಬಿ ಮಾಡಿ ಅವರುಗಳ ಪೈಕಿ 2 ರಿಂದ 8 ಆರೋಪಿತರು ಕೈ ಕಾಲುಗಳಿಂದ ಸಾಕ್ಷಿ-1 ರಿಂದ 4 ರವರ ಮೈಕೈಗೆ ಹೊಡೆದು ಸಮಾನ್ಯ ಸ್ವರೂಪದ ನೋವುಂಟು ಮಾಡುವ ಮೂಲಕ ಭಾ ದಂ ಸಂ ಕಲಂ 323 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

6. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಆಕ್ರಮವಾಗಿ ಗುಂಪುಕಟ್ಟಿ ಕೊಂಡು ಬಂದು ದೊಂಬಿ ಮಾಡಿ, 1 ನೇ ಆರೋಪಿತನು ಹಾರೇ ಕೋಲನ್ನು ತೆಗೆದು ಕೊಂಡು ಸಾಕ್ಷಿ-1 ರವರತಲೆಯ ಬಳಿ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸುವ ಮೂಲಕ ಭಾ ದಂ ಸಂ ಕಲಂ 324 ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

7. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಏಕೋದ್ದೇಶ ಸಾಧನೆಗಾಗಿ ಆಕ್ರಮವಾಗಿ ಗುಂಪುಕಟ್ಟಿ ಕೊಂಡು ಬಂದು ದೊಂಬಿ ಮಾಡಿ, 1 ನೇ ಆರೋಪಿತನು ಸಾಕ್ಷಿ-2 ರವರು ಧರಿಸಿದ ಸೀರೆ ಮತ್ತು ಜಾಕಿಟ್ ನ್ನು ಎಳೆದು ಮಾನಕ್ಕೆ ಚ್ಯುತಿಯನ್ನುಂಟು ಮಾಡುವ ಮೂಲಕ ಭಾ ದಂ ಸಂ ಕಲಂ 354B ಸಹವಾಚಕ 149 ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

8. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಸಾಕ್ಷಿ-1 ರಿಂದ 4 ರವರಿಗೆ ಪ್ರಾಣ ಬೆದರಿಕೆ ಹಾಕುವ ಮೂಲಕ ಭಾ ದಂ ಸಂ ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ

ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತ ವಾಗಿ ಸಾಭೀತು ಪಡಿಸುತ್ತದೆಯೇ?

9. ಯಾವ ಆದೇಶ ?

**9.** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

ಅಂಶ 1: ನಕಾರಾತ್ಮಕವಾಗಿ

ಅಂಶ 2: ನಕಾರಾತ್ಮಕವಾಗಿ

ಅಂಶ 3: ನಕಾರಾತ್ಮಕವಾಗಿ

ಅಂಶ 4: ನಕಾರಾತ್ಮಕವಾಗಿ

ಅಂಶ 5: ನಕಾರಾತ್ಮಕವಾಗಿ

ಅಂಶ 6: ನಕಾರಾತ್ಮಕವಾಗಿ

ಅಂಶ 7: ನಕಾರಾತ್ಮಕವಾಗಿ

ಅಂಶ 8: ನಕಾರಾತ್ಮಕವಾಗಿ

ಅಂಶ 9: ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶ,

## ಕಾ ರ ಣ ಗ ಳು

**10. ಅಂಶ 1 ರಿಂದ 8 :–** ಈ ಎಂಟು ಅಂಶಗಳು ಏಕಘಟನೆಯಿಂದ ಉದ್ಭವಿಸಿರುವುದರಿಂದ ಚರ್ಚೆಯ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ 08 ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಭೀತುಪಡಿಸುವ ಸಲುವಾಗಿ ಒಟ್ಟು 12 ಜನ ಸಾಕ್ಷಿದಾರರನ್ನು ಫ್ರಾಸಾ–1 ರಿಂದ 12 ರಂತೆ ವಿಚಾರಣೆಗೆ

ಒಳಪಡಿಸಿ ಕೊಂಡು, ಒಟ್ಟು 19 ದಾಖಲಾತಿಗಳನ್ನು ನಿಪಿ–1 ರಿಂದ 19 ರಂತೆ ಹಾಗೂ ಮು. ಮಾ– 1 ಮತ್ತು 2 ರಂತೆ ಗುರುತಿಸಿ ಕೊಂಡಿರುತ್ತದೆ.

**11.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವನ್ನು ಈಗಾಗಲೇ ಹೇಳಲಾಗಿರುತ್ತದೆ. ಫ್ರಾಸಾ–1 ಮಹಲಿಂಗಪ್ಪ ದೂರುದಾರ / ನೊಂದ ವ್ಯಕ್ತಿ, ಫ್ರಾಸಾ–2 ಚೈತ್ರ, ಫ್ರಾಸಾ–3 ಜಯಮ್ಮ ಮತ್ತು ಫ್ರಾಸಾ–4 ಕರೆ ಪಾತಣ್ಣ ಇವರು ನೊಂದ ವ್ಯಕ್ತಿಗಳು, ಫ್ರಾಸಾ–5 ಯಶೋಧರ ಇವರು ಪ್ರತ್ಯಕ್ಷದರ್ಶಿ, ಪಾಸಾರ್–6 ಈಶ್ವರಮ್ಮ ಮತ್ತು ಫ್ರಾಸಾ–7 ರೇವಣ್ಣ ಇವರು ಸ್ಥಳ ಪಂಚನಾಮೆ ಸಾಕ್ಷಿದಾರರು, ಫ್ರಾಸಾ–8 ಮಹಲಿಂಗಪ್ಪ ಇವರು ಪ್ರತ್ಯಕ್ಷದರ್ಶಿ, ಫ್ರಾಸಾ–9 ಕರಿಸಿದ್ದಯ್ಯ ಮತ್ತು ಫ್ರಾಸಾ–10 ರಾಜಣ್ಣ. ಇ, ಇವರು ಸ್ಥಳ ಪಂಚನಾಮೆ ಸಾಕ್ಷಿದಾರರು, ಫ್ರಾಸಾ–11 ರಾಜು. ಹೆಚ್. ಎಂ. ತನಿಖಾಧಿಕಾರಿ, ಫ್ರಾಸಾ–12 ಡಾ. ಶ್ರೀಧರ ರೆಡ್ಡಿ ಇವರು ವೈದ್ಯಾಧಿಕಾರಿಗಳು ಇರುತ್ತಾರೆ. ನಿಪಿ–1 ದೂರು, ನಿಪಿ–2 ಸ್ಥಳ ಮಹಜರು, ನಿಪಿ–3 ಭಾ. ದಂ. ಪ್ರ. ಸಂ. ಕಲಂಃ164(5)ರಡಿಯಲ್ಲಿ ಫ್ರಾಸಾ–2 ರವರ ಹೇಳಿಕೆ, ನಿಪಿ–4 ಭಾ. ದಂ. ಪ್ರ. ಸಂ. ಕಲಂಃ164(5)ರಡಿಯಲ್ಲಿ ಫ್ರಾಸಾ–3 ರವರ ಹೇಳಿಕೆ, ನಿಪಿ–5 ಫ್ರಾಸಾ–3 ರವರ ಹೇಳಿಕೆ, ನಿಪಿ–6 ಫ್ರಾಸಾ–4 ರವರ ಹೇಳಿಕೆ, ನಿಪಿ–7 ಸ್ಥಳ ಮತ್ತು ಅಮಾನತ್ತು ಪಂಚನಾಮೆ, ನಿಪಿ–8 ಫ್ರಾಸಾ–4 ರವರ ಹೇಳಿಕೆ, ನಿಪಿ–9 ಫ್ರಾಸಾ–8 ರವರ ಹೇಳಿಕೆ, ನಿಪಿ–10 ಪಂಚರಿಗೆ ನೀಡಲಾದ ನೋಟೀಸ್, ನಿಪಿ–11 ಸೂಚನಾ ಪತ್ರ, ನಿಪಿ–12 ಪ್ರಥಮ ವರ್ತಮಾನ ವರದಿ, ನಿಪಿ–13 ಪಂಚರಿಗೆ ನೀಡಲಾದ ನೋಟೀಸ್, ನಿಪಿ–14 ಮತ್ತು 15 ಮಾಲು ಪಟ್ಟಿಗಳು , ನಿಪಿ–16 ರಿಂದ ನಿಪಿ–19 ರವರೆಗೆ ಗಾಯದ ಪ್ರಮಾಣ ಪತ್ರಗಳು, ಮು. ಮಾ–1 ಮತ್ತು 2 ಸೀರೆ ಮತ್ತು ಜಾಕೀಟು ಇರುತ್ತವೆ.

**12.** ಫ್ರಾಸಾ–1 ಮಹಲಿಂಗಪ್ಪ ದೂರುದಾರರ/ನೋಂದ ಸಾಕ್ಷಿದಾರರಿದ್ದು ಇವರು ತನ್ನ ಸಾಕ್ಷ್ಯದಲ್ಲಿ ಸುಮಾರು 2 ವರ್ಷಗಳ ಹಿಂದೆ ರಾತ್ರಿ 8.20 ರ ಸಮಯದಲ್ಲಿ ತಾನು ಮತ್ತು ಚಾಸಾ–2 ರಿಂದ 4 ರವರು ತಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ಅಕ್ರಮವಾಗಿ ಗುಂಪುಕಟ್ಟಿಕೊಂಡು ಕಲ್ಲು ಮತ್ತು ಹಾರೆಕೋಲನ್ನು ಹಿಡಿದುಕೊಂಡು ಬಂದು ನಮಗೆ ಸೂಳೇಮಕ್ಕಳಾ, ಬೋಳೀಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿ ತನಗೆ ಹಾರೆಕೋಲಿನಿಂದ ತನ್ನ ತಲೆಗೆ ಹೊಡೆದ. ಚಾಸಾ–2 ರವರಿಗೆ 3 ನೇ ಆರೋಪಿತನು ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದನು. ಉಳಿದ ಎಲ್ಲಾ ಆರೋಪಿತರು ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಮೆತ್ತಗೆ ಮಾಡಿದರು. ಚಾಸಾ–5 ಮತ್ತು 6 ರವರು ಜಗಳವನ್ನು ಬಿಡಿಸಿದರು. ಆರೋಪಿತರು ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ, ನಿಮ್ಮ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು. ನಂತರ ಗಾಯಗೊಂಡ ನಾವೆಲ್ಲರೂ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆವು. ನಂತರ ಈ ಬಗ್ಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿದ್ದಾಗ ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಹಾರೆಕೋಲನ್ನು ನೋಡಿ ಗುರುತಿಸಿ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–1 ರವರನ್ನು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ 1 ನೇ ಆರೋಪಿ ಗಲಾಟೆ ಬಿಡಿಸಲು ಬಂದ ಚಾಸಾ–2 ರವರ ಸೀರೆಯನ್ನು ಹಿಡಿದು ಎಳೆದಾಡಿ ಕೈ ಕಾಲುಗಳಿಂದ ಹೊಡೆದ ಎಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

**13.** ಫ್ರಾಸಾ–1 ರವರನ್ನು ಆರೋಪಿತರ ಪರ ವಕೀಲರು ಮಾಡಿದ ಪಾಟಿ ಸವಾಲಿನಲ್ಲಿ ಚಾಸಾ–2 ತನ್ನ ಸೊಸೆ. ಚಾಸಾ–3 ತನ್ನ ಅಕ್ಕ ಅವರು ನಾಗಪ್ಪನಹಟ್ಟಿ ಗ್ರಾಮದಲ್ಲಿ ವಾಸವಿದ್ದಾರೆ. ಚಾಸಾ–4 ತನ್ನ ತಮ್ಮ. ಚಾಸಾ–5 ತನ್ನ ಅಣ್ಣ. ಚಾಸಾ–6

ತನ್ನ ಅಣ್ಣನ ಮಗ. ಚಾಸಾ-7 ತನ್ನ ಹೆಂಡತಿಯ ಅಕ್ಕ. ಚಾಸಾ-8 ತನ್ನ ಸಂಬಂಧಿ. ಆರೋಪಿತರೆಲ್ಲರೂ ತನ್ನ ಸಂಬಂಧಿಕರು.1 ನೇ ಆರೋಪಿಯ ಮನೆಯ ಪಶ್ಚಿಮ ದಿಕ್ಕಿಗೆ ಚಾಸಾ-2 ಮತ್ತು 3 ರವರ ಮನೆ ಇದೆ. ಅದರ ಪಕ್ಕದಲ್ಲಿ ತನ್ನ ಮನೆ ಇದೆ. 1 ಆರೋಪಿಯ ಮನೆ ಮುಂದೆ ಸಾರ್ವಜನಿಕ ರಸ್ತೆ ಇದೆ. 1 ಆರೋಪಿ ಮತ್ತು ಚಾಸಾ-2 ರವರ ಮನೆಯ ಮಧ್ಯೆ 6-7 ಅಡಿ ಖಾಲಿ ಜಾಗ ಇದೆ. ಈ ವಿಚಾರವಾಗಿ ಆರೋಪಿತರು ಹಾಗೂ ನಮ್ಮ ನಡುವೆ ಆಗಾಗ ಜಗಳ ನಡೆಯುತ್ತದೆ. ಈ ವಿಚಾರವಾಗಿ ನಮ್ಮ ಮತ್ತು ಆರೋಪಿತರ ನಡುವೆ ವೈ ಮನಸ್ಸು ಇದೆ. ಸದರಿ ಖಾಲಿ ಜಾಗ ಸರ್ಕಾರಕ್ಕೆ ಸೇರಿದ್ದು ಎಂದರೆ ಸಾಕ್ಷಿಯು ನಮಗೆ ಸೇರಿದ್ದು. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಸಿರುತ್ತೇನೆ. ತಾನು ಮತ್ತು ಚಾಸಾ-4 ರವರು ಬೇರೆ ಬೇರೆ ವಾಸವಾಗಿದ್ದೇವೆ. ತನ್ನ ಹಾಗೂ 1 ನೇ ಆರೋಪಿ ನಡುವೆ ಇರುವ ಸಮಸ್ಯೆ ಇಲ್ಲ. ಇದು 1 ನೇ ಆರೋಪಿ ಮತ್ತು ಚಾಸಾ-2 ರವರ ಮನೆ ಮಧ್ಯೆ ಇರುವ ಜಾಗದ ಸಮಸ್ಯೆ. 1 ನೇ ಆರೋಪಿ ಮತ್ತು ಚಾಸಾ-2 ರವರ ಮನೆ ಮಧ್ಯೆ ಸುಮಾರು 15 ಅಡಿ ಅಗಲ ರಸ್ತೆ ಇದೆ. ತನ್ನ ಮನೆ ಚಾಸಾ-2 ರವರ ಮನೆಯ ಪಶ್ಚಿಮ ದಿಕ್ಕಿಗೆ ಬರುತ್ತದೆ. ತನ್ನ ಮನೆಯಲ್ಲಿ ಒಟ್ಟು 4 ಜನ ವಾಸವಿದ್ದೇವೆ. ಚಾಸಾ-2 ರವರ ಮನೆಯಲ್ಲಿ ಒಟ್ಟು 6 ಜನ ವಾಸವಿದ್ದಾರೆ. 1 ನೆ ಆರೋಪಿಯ ಮನೆಯಲ್ಲಿ ಒಟ್ಟು 3 ಜನ ವಾಸವಿದ್ದಾರೆ. ನಮ್ಮ ಮನೆ ಮುಂದಿನ ರಸ್ತೆ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಹಾದು ಹೋಗುತ್ತದೆ. ಸದರಿ ಜಾಗದ ವಿಚಾರವಾಗಿ ನಾವು ಯಾವುದೇ ಪಂಚಾಯಿತಿ ಮಾಡಿರುವುದಿಲ್ಲ. ತಾನು ದೂರು ನೀಡಿದಾಗ ಸಮಯ ರಾತ್ರಿ 9.00 ರಿಂದ 10.00 ಗಂಟೆ ಆಗಿತ್ತು. ನಿಪಿ-1 ನ್ನು ಯಾರು ಬರೆದರು ಎಂದು ತನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. 6 ಮತ್ತು 7 ನೇ ಆರೋಪಿತರು ನಮಗೆ ಹೊಡೆದಿರುವುದಿಲ್ಲ. ನಿಪಿ-1 ರಲ್ಲಿ ತಾನು ಆರೋಪಿತರು ದೊಣ್ಣೆ ಮತ್ತು ಕಲ್ಲುಗಳಿಂದ ಹೊಡೆದರು ಎಂದು ಹೇಳಿಕೆ ನೀಡಿರುವುದಿಲ್ಲ. ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಕಾರ್ ನಲ್ಲಿ ಹೋಗಿರುತ್ತೇವೆ.

ನಮ್ಮ ಊರಿನಿಂದ ಹಿರಿಯೂರು 20 ಕಿ ಮೀ ದೂರ ಇದೆ. ನಮ್ಮ ಊರಿನಿಂದ ಚಿತ್ರದುರ್ಗ 30-40 ಕಿ ಮೀ ದೂರ ಇದೆ. ಈ ಗಲಾಟೆ ಜಾಗದ ವಿಚಾರವಾಗಿ ನಡೆದಿರುತ್ತದೆ. ಗಲಾಟೆ ನಡೆದ ಸಮಯದಲ್ಲಿ ನಮ್ಮ ಮನೆಯಲ್ಲಿ 4 ಜನ ಇದ್ದೆವು. ಗಲಾಟೆ ಸುಮಾರು ಅರ್ಧ ಗಂಟೆ ನಡೆದಿರುತ್ತದೆ. ಗಲಾಟೆ ನಡೆದ ಸಮಯದಲ್ಲಿ ನಮ್ಮನ್ನು ಹಾಗೂ ಆರೋಪಿತರನ್ನು ಹೊರತು ಪಡಿಸಿ ಬೇರೆ ಯಾರೂ ಇರಲಿಲ್ಲ. ಶಿವಗಂಗಾ ಗ್ರಾಮದಲ್ಲಿ ಸುಮಾರು 45 ಮನೆಗಳು ಇವೆ. ನಾವು ಹಿರಿಯೂರು ಸರ್ಕಾರಿ ಆಸ್ಪತ್ರೆ ಗೆ ಅಲ್ಲಿ ಆಗುವುದಿಲ್ಲ ಎಂದು ತಿಳಿಸಿದ ಮೇರೆಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಯಲ್ಲಿ X-ray ಮಾಡಿರುತ್ತಾರೆ. ತಾನು ದೂರು ನೀಡಿದ ನಂತರ ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ಎಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

**14.** ಫ್ರಾಸಾ-2 ಚೈತ್ರ ಇವರು ನೊಂದ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ11.02.2023 ರಂದು ರಾತ್ರಿ 8.30 ರ ಸಮಯದಲ್ಲಿ ತಾನು ಮತ್ತು ಚಾಸಾ-1 ಹಾಗೂ 3 ಮತ್ತು 4 ರವರು ನಮ್ಮ ಮನೆಯ ಹತ್ತಿರ ಇರುವಾಗ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದರು. 1 ನೇ ಆರೋಪಿ ಚಾಸಾ-1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದನು. 3 ನೇ ಆರೋಪಿತನು ತನಗೆ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದನು. ಉಳಿದ ಎಲ್ಲಾ ಆರೋಪಿತರು ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದರು. ಚಾಸಾ-5 ಮತ್ತು 6 ರವರು ಜಗಳವನ್ನು ಬಿಡಿಸಿದರು. ನಂತರ ಗಾಯಗೊಂಡ ನಾವೆಲ್ಲರೂ ಹಿರಿಯೂರು ಆಸ್ಪತ್ರೆಗೆ ಬಂದೆವು ಪ್ರಥಮ ಚಿಕಿತ್ಸೆ ಪಡೆದು ನಂತರ ನಾವೆಲ್ಲಾ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗೆ ಹೋದೆವು. ನ್ಯಾಯಾಲಯದ ಮುಂದೆ ಇರುವ ನೀಲಿ ಬಣ್ಣದ ಸೀರೆ ಹಾಗೂ ಕಂದು ಬಣ್ಣದ ಜಾಕೀಟನ್ನು ಅಬ್ಬಿನಹೊಳೆಯಲ್ಲಿ ಪೋಲಿಸರಿಗೆ ನೀಡಿರುತ್ತೇನೆ. ಪೋಲಿಸರು ನಮ್ಮ ಮನೆಗೆ ಬಂದಿರುವುದಿಲ್ಲ. ತನ್ನ ಸಮಕ್ಷಮ ಯಾವುದೇ

ಪಂಚನಾಮೆ ಮಾಡಿರುವುದಿಲ್ಲ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–2 ರವರನ್ನು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ 1 ನೇ ಆರೋಪಿ ತನ್ನ ಸೀರೆ ಹಿಡಿದು ಎಳೆದಾಡಿ ತನ್ನ ಮಾನಕ್ಕೆ ಚ್ಯುತಿ ಬರುವಂತೆ ನಡೆದುಕೊಂಡಿರುತ್ತಾರೆ. ಆರೋಪಿತರು ಗುಂಪುಕಟ್ಟಿಕೊಂಡು ಬಂದು ನಮಗೆ ಸೂಳೇಮಕ್ಕಳಾ, ಬೋಳೀಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿದರು. ದಿಃ14.02.2023 ರಂದು ಅಬ್ಬಿನಹೊಳೆ ಪೋಲಿಸ್ ಠಾಣೆಗೆ ಚಾಸಾ–9 ಮತ್ತು 10 ರವರು ಬಂದಿದ್ದರು. ನಿಪಿ–2 ರಂತೆ ತನ್ನ ಸಮಕ್ಷಮ ಪಂಚನಾಮೆಯನ್ನು ಸಂಜೆ 4.30 ರಿಂದ 5.00 ಗಂಟೆಯವರೆಗೆ ಜರುಗಿಸಿ ತಾನು ಹಾಜರು ಪಡಿಸಿದ ಮು.ಮಾ–1 ಮತ್ತು 2 ನ್ನು ಅಮಾನತ್ತು ಪಡಿಸಿಕೊಂಡರು ಎಂದು ಸ್ವಷ್ಟವಾಗಿ ಉತ್ತರಿಸಿರುತ್ತಾರೆ.

**15.** ಸದರಿ ಫ್ರಾಸಾ–2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ಗಲಾಟೆ ನಡೆಯುವಾಗ ಸುಮಾರು ರಾತ್ರಿ 8.30 ಸಮಯ ಆಗಿತ್ತು. ಆಗ ಸಮಯದಲ್ಲಿ ನಾವು ನಮ್ಮ ಮನೆಯಲ್ಲಿ 7 ಜನ ಇದ್ದೆವು. 1 ನೇ ಆರೋಪಿಯ ಮನೆ ತನ್ನ ಮನೆಯ ಪಶ್ಚಿಮ ದಿಕ್ಕಿಗೆ ಬರುತ್ತದೆ. ತನ್ನ ಹಾಗೂ 1 ಆರೋಪಿಯ ಮನೆ ನಡುವೆ ಸಾರ್ವಜನಿಕ ರಸ್ತೆ ಇದೆ. 1 ಆರೋಪಿ ಮತ್ತು ತನ್ನ ಮನೆಯ ಮಧ್ಯೆ 6–7 ಅಡಿ ಖಾಲಿ ಜಾಗ ಇದೆ. ಸದರಿ ಖಾಲಿ ಜಾಗ ಸರ್ಕಾರಕ್ಕೆ ಸೇರಿದ್ದು. ಚಾಸಾ–1 ಮತ್ತು ಚಾಸಾ–4 ರವರು ಬೇರೆ ಬೇರೆ ವಾಸವಾಗಿದ್ದೇವೆ. 1 ನೇ ಆರೋಪಿ ಮತ್ತು ತನ್ನ ಮನೆ ಮಧ್ಯೆ ಸುಮಾರು 15 ಅಡಿ ಅಗಲ ರಸ್ತೆ ಇದೆ. ತನ್ನ ಮನೆಯಲ್ಲಿ ಒಟ್ಟು 5 ಜನ ವಾಸವಿದ್ದೇವೆ. ಸದರಿ ಜಾಗದ ವಿಚಾರವಾಗಿ ನಮಗೂ ಹಾಗೂ ಆರೋಪಿತರ ನಡುವೆ ಯಾವುದೇ ಪಂಚಾಯಿತಿ ಆಗಿರುವುದಿಲ್ಲ. 1 ನೇ ಆರೋಪಿ ಚಾಸಾ–1 ರವರಿಗೆ ಹಾರೇ ಕೋಲಿನಿಂದ ಹೊಡೆದಾಗ ರಾತ್ರಿ 8.30 ಸಮಯ ಆಗಿತ್ತು, ಗಲಾಟೆ ನಡೆದ

ಸಮಯದಲ್ಲಿ ಸುಮಾರು 30–40 ಜನ ಇದ್ದರು. 4 ನೇ ಆರೋಪಿ ತನಗೆ ಹೊಡೆದಿರುವುದಿಲ್ಲ. 5 ನೇ ತನಗೆ ಹೊಡೆದಿಲ್ಲ, 6 ನೇ ಆರೋಪಿ ತನಗೆ ಹೊಡೆದಿರುವುದಿಲ್ಲ. 7 ಮತ್ತು 8 ನೇ ಆರೋಪಿತರು ತನಗೆ ಹೊಡೆದಿರುವುದಿಲ್ಲ ಗಲಾಟೆ ನಡೆದಾಗ ಕತ್ತಲೆ ಇದುದರಿಂದ ಯಾವ ಯಾವ ಆರೋಪಿತರು ಯಾವ ಯಾವ ಭಾಗಕ್ಕೆ ಹೊಡೆದರು ಎಂದು ಸರಿಯಾಗಿ ಗೊತ್ತಾಗಲಿಲ್ಲ. ಸಾಮಾನ್ಯವಾಗಿ ರೈತರ ಮನೆಗಳಲ್ಲಿ ಹಾರೆಕೋಲು ಇರುತ್ತದೆ. ಆರೋಪಿತರು ನಮಗೆ ಬೈದಿಲ್ಲ, ತಾನು ಪೋಲಿಸರಿಗೆ ಮು.ಮಾ–1 ಮತ್ತು 2 ನ್ನು ನೀಡಿದ ದಿನಾಂಕ ನೆನಪಿಲ್ಲ. ಮು.ಮಾ–1 ಮತ್ತು 2 ನ್ನು ಪೋಲಿಸ್ ಠಾಣೆಗೆ ನೀಡಲು ಒಟ್ಟು 5 ಜನ ಹೋಗಿರುತ್ತೇವೆ. ಎಂದು ಉತ್ತರಿಸಿರುತ್ತಾರೆ.

**16.** ಫ್ರಾಸಾ–3 ಜಯಮ್ಮ ಇವರು ನೋಂದ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. 1 ನೇ ಆರೋಪಿ ಚಾಸಾ–1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದಿಲ್ಲ. 3 ನೇ ಆರೋಪಿತನು ಚಾಸಾ–2 ರವರ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದಿಲ್ಲ. 2 ರಿಂದ 8 ನೇ ಆರೋಪಿತರು ತನಗೆ ಮತ್ತು ಚಾಸಾ–4 ರವರಿಗೆ ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದಿರುವುದಿಲ್ಲ. ಚಾಸಾ–5 ಮತ್ತು 6 ರವರು ಜಗಳವನ್ನು ಬಿಡಿಸಿರುವುದಿಲ್ಲ. ಆರೋಪಿತರು ತಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ತಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ–3 ರವರನ್ನು ಪಾಟೀ ಸವಾಲು ಮಾಡಿದರೂ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ವಿಫಲವಾಗಿರುತ್ತದೆ.

**17.** ಪ್ರಾಸಾ–4 ಕರಿಪಾತಣ್ಣ ನೋಂದ ಸಾಕ್ಷಿದಾರರಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರೆಲ್ಲರೂ ನಮ್ಮ ಸಂಬಂಧಿಕರು, ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. 1 ನೇ ಆರೋಪಿ ಚಾಸಾ–1 ರವರಿಗೆ ಹಾರೆಕೋಲಿನಿಂದ ತಲೆಗೆ ಹೊಡೆದಿಲ್ಲ. 3 ನೇ ಆರೋಪಿತನು ಚಾಸಾ–2 ರವರ ಸೀರೆ ಹಿಡಿದು ಎಳೆದಾಡಿ, ಕೈ ಕಾಲುಗಳಿಂದ ಹೊಡೆದಿಲ್ಲ. 2 ರಿಂದ 8 ನೇ ಆರೋಪಿತರು ತನಗೆ ಮತ್ತು ಚಾಸಾ–3 ರವರಿಗೆ ಕೈ ಕಾಲುಗಳಿಂದ ಕೆಳಗೆ ಹಾಕಿ ತುಳಿದಿರುವುದಿಲ್ಲ. ಚಾಸಾ–5 ಮತ್ತು 6 ರವರು ಜಗಳವನ್ನು ಬಿಡಿಸಿರುವುದಿಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸುವುದಿಲ್ಲ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿರದಿರುತ್ತಾರೆ. ಪ್ರಾಸಾ–4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾಗುವ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**18.** ಪ್ರಾಸಾ–5 ಯಶೋಧರ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ ಹಾಗೂ ಯಾವುದೇ ಗಲಾಟೆಯನ್ನು ಬಿಡಿಸಿರುವುದಿಲ್ಲ. ಪೋಲಿಸರು ತನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಹಾರೆ ಕೋಲನ್ನು ನೋಡಿ ಗುರುತಿಸುವುದಿಲ್ಲ. ನಿಪಿ–7 ಕ್ಕೆ ನಾನು ಒಂದು ವರ್ಷದ ಹಿಂದೆ ಅಬ್ಬಿನಹೊಳೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಪಿ–7 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ–5 ರವರನ್ನು ಪ್ರತಿಕೂಲ ಸಾಕ್ಷಿ

ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**19.** ಪ್ರಾಸಾ–6 ಈಶ್ವರಮ್ಮ ಇವರು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–7 ಕ್ಕೆ ತಾನು ಒಂದು ವರ್ಷದ ಹಿಂದೆ ಅಬ್ಬಿನಹೊಳೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಪಿ–7 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ–6 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**20.** ಪ್ರಾಸಾ–7 ರೇವಣ್ಣ ಇವರು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ–7 ಕ್ಕೆ ತಾನು ಎರಡು ವರ್ಷದ ಹಿಂದೆ ಅಬ್ಬಿನಹೊಳೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಿಪಿ–7 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ–7 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**21.** ಫ್ರಾಸಾ-8 ಮಹಲಿಂಗಪ್ಪ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ತಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ. ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-8 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**22.** ಫ್ರಾಸಾ-9 ಎಂ. ಹೆಚ್. ಕರಿಸಿದ್ದಯ್ಯ ಇವರು ಅಮಾನತ್ತು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ನಿಪಿ-2 ಕ್ಕೆ ಈಗ ಎರಡು ವರ್ಷಗಳ ಹಿಂದೆ ಬೇರೊಂದು ಕೆಲಸಕ್ಕೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಅಲ್ಲಿ ಸಹಿ ಮಾಡಿದ್ದೇನೆ. ಪೊಲೀಸ್‌ರು ತನ್ನ ಸಮಕ್ಷಮ ಯಾವುದೇ ಅಮಾನತ್ತು ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಲಾಗುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-9 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**23.** ಫ್ರಾಸಾ-10 ರಾಜಣ್ಣ ಇವರು ಅಮಾನತ್ತು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ಪಂಚನಾಮೆಬಗೆ ಬರಲು ತನಗೆ ನೋಟೀಸ್ ನೀಡಿರುತ್ತಾರೆ. ತಾನು ನಿಪಿ-2 ಮತ್ತು 10 ಕ್ಕೆ ಈಗ

ಎರಡು ವರ್ಷಗಳ ಅಬ್ಬಿನಹೊಟೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಪೊಲೀಸ್‌ರು ತನ್ನ ಸಮಕ್ಷಮ ಯಾವುದೇ ಅಮಾನತ್ತು ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ–2 ಮತ್ತು 10 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ ನ್ಯಾಯಾಲಯದ ಮುಂದೆ ಇರುವ ಸ್ವತ್ತುಗಳನ್ನು ನೋಡಿ ಗುರುತಿಸಲಾಗುವುದಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ–10 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಹೊರತರುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ.

**24.** ಫ್ರಾಸಾ–11 ರಾಜು. ಹೆಚ್. ಎಂ. ಇವರು ಪೊಲೀಸ್/ತನಿಖಾಧಿಕಾರಿ–ಗಳಾಗಿದ್ದು, ತಮ್ಮ ತನಿಖೆಗನುಣುವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**25.** ಫ್ರಾಸಾ–12 ಡಾಃ ಶ್ರೀಧರ ರೆಡ್ಡಿ ವೈದ್ಯಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 11.02.2023 ರಂದು ರಾತ್ರಿ 11.20 ಗಂಟೆಗ ತಾನು ಆಸ್ಪತ್ರೆಯ ಪ್ರಭಾರದಲ್ಲಿದಾದಗ ಈ ಪ್ರಕರಣದ ಚಾಸಾ–1 ಮಹಲಿಂಗಪ್ಪ, ಚಾಸಾ–2 ಚೈತ್ರ, ಚಾಸಡಾ–3 ಜಯಮ್ಮ ಮತ್ತು ಚಾಸಾ–4 ಕರೆಪಾತಣ್ಣ ಎನ್ನುವವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು. ತಾನು ಚಾಸಾ–1 ರವರನ್ನು ಪರಿಕ್ಷೀಸಿದಾಗ 1) ಸೊಂಟ ಮತ್ತು ಕಾಲುಗಳಲ್ಲಿ ನೋವಿನಿಂದ ಕೂಡಿದ ಒಳಗಾಯ ಹಾಗೂ ಹಣೆಯ ಮೇಲೆ 2X3 ಸೆಂ. ಮೀ ಅಳತೆಯ ತರಚಿದ ಗಾಯವಾಗಿತ್ತು. ತಾನು ಚಾಸಾ–2 ರವರನ್ನು ಪರಿಕ್ಷೀಸಿದಾಗ 1) ಎಡಭುಜದಲ್ಲಿ ನೋವಿನಿಂದ ಕೂಡಿದ ಒಳಗಾಯ ಕಂಚು ಬಂದಿರುತ್ತದೆ. ತಾನು ಚಾಸಾ–3 ರವರನ್ನು ಪರಿಕ್ಷೀಸಿದಾಗ 1) ಎಡಗೈ ಮತ್ತು ಬಲಮೊಣಕಾಲಿನಲ್ಲಿ ನೋವಿನಿಂದ ಕೂಡಿದ ಒಳಗಾಯ ಕಂಡು ಬಂದಿರುತ್ತದೆ, ತಾನು ಚಾಸಾ–4 ರವರನ್ನು

ಪರಿಕ್ಷೀಸಿದಾಗ 1) ಬಲಗಾಲು ಮತ್ತು ಸೊಂಟದ ಭಾಗದಲ್ಲಿ ನೋವಿನಿಂದ ಕೂಡಿದ ಒಳಗಾಯ ಕಂಡು ಬಂದಿರುತ್ತದೆ. ತನ್ನ ಅಭಿಪ್ರಾಯದಲ್ಲಿ ಈ ಮೇಲೆ ತಿಳಿಸಿದ ಗಾಯಗಳು ಸಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ತಾನು ದಿನಾಂಕಃ11.03.2023 ರಂದು ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಪ್ರಾಸಾ-12 ರವರು ಆರೋಪಿತರ ಪರ ವಕೀಲರು ಮಾಡಿದ ಪಾಟೀ ಪಾಟಿಸವಾಲಿನಲ್ಲಿ ಗಾಯಾಳುಗಳನ್ನು ಯಾರು ಕರೆದುಕೊಂಡು ಬಂದರು ಎಂದು ತನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿರುವುದಿಲ್ಲ. ತನ್ನ ಪ್ರಮಾಣ ಪತ್ರದಲ್ಲಿ ಗಾಯದ ವಯಸ್ಸನ್ನು ನಮೂದಿಸಿರುವುದಿಲ್ಲ. ಚಾಸಾ-1 ರಿಂದ 4 ರವರು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರುವುದಿಲ್ಲ. ಸಾಮಾನ್ಯವಾಗಿ ಒರಟಾದ ನೆಲದ ಮೇಲೆ ಬಿದ್ದರೆ ಮೇಲ್ಕಂಡ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ಸಾಕ್ಷ್ಯ ನುಡಿದಿದ್ದು ಈ ಅಂಶಗಳನ್ನು ಪರಿಶೀಲಿಸಿದಾಗ ಚಾಸಾ-1 ರಿಂದ 4 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆ ಸಂಶಯವನ್ನು ಮೂಡಿಸುತ್ತದೆ.

**26.** ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ ಪ್ರಾಸಾ-4 ರವರು ಗಾಯಗೊಂಡ ಸಾಕ್ಷಿದಾರರು. ಪ್ರಾಸಾ-1 ಮತ್ತು ಪ್ರಾಸಾ-2 ರವರು ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿದ್ದಾರೆ. ಆದರೆ ಪಾಟೀ ಸವಾಲಿನಲ್ಲಿ ಪ್ರಾಸಾ-1 ರವರು ತಮ್ಮ ಕುಟುಂಬ ಮತ್ತು ಆರೋಪಿತರ ನಡುವೆ ಹಿಂದಿನ ವೈಷಮ್ಯವಿದೆ ಎಂದು ನುಡಿದಿದ್ದಾರೆ. ಪ್ರಾಸಾ-1 ರವರು ನಿ.ಪಿ-1 ರಲ್ಲಿರುವ ಸಂಗತಿಗಳು ತಮಗೆ ತಿಳಿದಿಲ್ಲ ಮತ್ತು ನಿ.ಪಿ-1 ನ್ನು ಯಾರು ಬರೆದರು ಎಂಬುದೂ ತಮಗೆ ತಿಳಿದಿಲ್ಲ ಎಂದು ನುಡಿದಿದ್ದಾರೆ. ಪ್ರಾಸಾ-1 ರವರು ಘಟನೆ ನಡೆದ ಸಮಯದಲ್ಲಿ ಪ್ರಾಸಾ-1 ರಿಂದ 4 ಮತ್ತು ಆರೋಪಿತರ ಹೊರತುಪಡಿಸಿ ಬೇರೆ ಯಾರೂ ಅಲ್ಲಿರಲಿಲ್ಲ ಎಂದು ನುಡಿದಿದ್ದಾರೆ. ಇನ್ನೊಂದೆಡೆ ಪ್ರಾಸಾ-2 ರವರು ಪಾಟೀ ಸವಾಲಿನಲ್ಲಿ ಘಟನೆ ನಡೆದ ಸ್ಥಳದಲ್ಲಿ ಸುಮಾರು 30 ರಿಂದ 40 ಜನರು

ಸೇರಿಕೊಂಡಿದ್ದರು ಎಂದು ನುಡಿದಿದ್ದಾರೆ. ಆದ್ದರಿಂದ ಫ್ರಾಸಾ–1 ಮತ್ತು ಫ್ರಾಸಾ–2 ರವರ ಸಾಕ್ಷ್ಯದಲ್ಲಿ ಘಟನೆ ನಡೆದ ಸ್ಥಳದಲ್ಲಿ ಇತರರ ಹಾಜರಾತಿ ಕುರಿತು ಸ್ಪಷ್ಟವಾದ ವಿರೋದಭಾಸ ಕಂಡುಬರುತ್ತದೆ. ಫ್ರಾಸಾ–2 ರವರು, 5 ರಿಂದ 8 ನೇ ಆರೋಪಿತರು ತಮಗೆ ಹಲ್ಲೆ ಮಾಡಿಲ್ಲ ಎಂದು ನುಡಿದಿದ್ದಾರೆ. ಇದು 5 ರಿಂದ 8 ನೇ ಆರೋಪಿತರ ವಿರುದ್ಧದ ಪ್ರಕರಣದ ಬಗ್ಗೆ ಸಂಶಯವನ್ನು ಉಂಟುಮಾಡುತ್ತದೆ.

**27.** ಇನ್ನೂ ಫ್ರಾಸಾ–3 ಮತ್ತು ಫ್ರಾಸಾ–4 ರವರು ಸಹ ಗಾಯಗೊಂಡ ಸಾಕ್ಷಿದಾರರಾಗಿದ್ದು, ಅವರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿಲ್ಲ ಮತ್ತು ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿದ್ದಾರೆ. ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ, ಅಭಿಯೋಜನೆ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಂಗತಿಗಳು ಕಂಡುಬಂದಿರುವುದಿಲ್ಲ. ಫ್ರಾಸಾ–5 ಮತ್ತು ಫ್ರಾಸಾ–8 ರವರು ಪ್ರತ್ಯಕ್ಷ ಸಾಕ್ಷಿದಾರರೆಂದು ಹೇಳಲ್ಪಟ್ಟಿದ್ದರೂ, ಅವರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿಲ್ಲ. ಅವರು ಆರೋಪಿತರು ಮತ್ತು ಫ್ರಾಸಾ–1 ರಿಂದ 4 ರವರ ನಡುವೆ ಯಾವುದೇ ಘಟನೆ ನಡೆದಿರುವುದನ್ನು ನೋಡಿಲ್ಲ ಮತ್ತು ಯಾವುದೇ ಜಗಳವನ್ನು ಬಿಡಿಸಿಲ್ಲ ಎಂದು ನುಡಿದಿದ್ದಾರೆ. ಇವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ, ಅಭಿಯೋಜನೆ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಂಗತಿಗಳು ಕಂಡುಬಂದಿರುವುದಿಲ್ಲ.

**28.** ಫ್ರಾಸಾ–6, 7, 9 ಮತ್ತು ಫ್ರಾಸಾ–10 ರವರು ಅಮಾನತು ಮತ್ತು ಸ್ಥಳ ಮಹಜರ್ ಸಾಕ್ಷಿದಾರರಾಗಿದ್ದು, ಅವರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿಲ್ಲ. ಆದ್ದರಿಂದ ಸ್ಥಳ ಮತ್ತು ಅಮಾನತು ಮಹಜರ್ ಸಾಬೀತಾಗಿರುವುದಿಲ್ಲ. ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ, ಅಭಿಯೋಜನೆ ಪ್ರಕರಣಕ್ಕೆ ಸಹಾಯವಾಗುವಂತಹ ಯಾವುದೇ ಸಂಗತಿಗಳು ಕಂಡುಬಂದಿರುವುದಿಲ್ಲ.

**29.** ಮುಂದುವರೆದು ಫ್ರಾಸಾ–12 ರವರು ವೈದ್ಯರಾಗಿದ್ದು, ಅವರು ಫ್ರಾಸಾ–1 ರಿಂದ 4 ರವರನ್ನು ಪರೀಕ್ಷಿಸಿ ಗಾಯ ಪ್ರಮಾಣಪತ್ರಗಳನ್ನು ನೀಡಿದ್ದಾರೆ. ಆದರೆ ಪಾಟೀ ಸವಾಲಿನಲ್ಲಿ ಇಂತಹ ಗಾಯಗಳು ಒಬ್ಬ ವ್ಯಕ್ತಿ ಓರಟಾದ ನೆಲದ ಮೇಲೆ ಬಿದ್ದರೂ ಸಂಭವಿಸಬಹುದು ಎಂದು ನುಡಿದಿದ್ದಾರೆ. ಆದ್ದರಿಂದ ವೈದ್ಯಕೀಯ ಸಾಕ್ಷ್ಯವು ಆರೋಪಿತರು ಹಲ್ಲೆ ಮಾಡಿದ್ದಾರೆ ಎಂಬುದನ್ನು ಖಚಿತವಾಗಿ ಸಾಬೀತುಪಡಿಸುವುದಿಲ್ಲ.

**30.** ಇನ್ನು ಫ್ರಾಸಾ–11 ರವರು ತನಿಖಾಧಿಕಾರಿಯಾಗಿದ್ದು, ಅವರು ತನಿಖೆ ನಡೆಸಿದ ಬಗ್ಗೆ ಸಾಕ್ಷ್ಯ ನೀಡಿದ್ದಾರೆ. ಆದರೆ ತನಿಖಾಧಿಕಾರಿಯ ಸಾಕ್ಷ್ಯ ಮಾತ್ರದಿಂದ ಆರೋಪಿತರ ಅಪರಾಧವನ್ನು ಸಾಬೀತುಪಡಿಸಲು ಸಾಧ್ಯವಿಲ್ಲ. ಹೀಗಾಗಿ ಫ್ರಾಸಾ–1 ರಿಂದ ಫ್ರಾಸಾ–12 ರವರ ಸಾಕ್ಷ್ಯವನ್ನು ಒಟ್ಟಾರೆಯಾಗಿ ಪರಿಶೀಲಿಸಿದಾಗ, ಫ್ರಾಸಾ–1 ಮತ್ತು ಫ್ರಾಸಾ–2 ರವರ ಸಾಕ್ಷ್ಯದಲ್ಲಿ ಪ್ರಮುಖ ವಿರೋದಭಾಸಗಳಿವೆ. ಘಟನೆಯಲ್ಲಿ ಗಾಯಗೊಂಡ ಸಾಕ್ಷಿದಾರರಾದ ಫ್ರಾಸಾ–3 ಮತ್ತು ಫ್ರಾಸಾ–4 ರವರೂ ಸಹ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿಲ್ಲ. ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಮಹಜರ್ ಸಾಕ್ಷಿದಾರರು ಸಹ ಅಭಿಯೋಜನೆ ಪ್ರಕರಣವನ್ನು ಬೆಂಬಲಿಸಿಲ್ಲ. ವೈದ್ಯರು ಮತ್ತು ತನಿಖಾಧಿಕಾರಿಯ ಸಾಕ್ಷ್ಯ ಮಾತ್ರದಿಂದ ಆರೋಪಿತರು ಹೇಳಲಾದ ಅಪರಾಧವನ್ನು ವೆಸಗಿದ್ದಾರೆಂದು ತೀರ್ಮಾನಿಸಲು ಸಾಧ್ಯವಿಲ್ಲ. ಆದ್ದರಿಂದ ಆರೋಪಿತರು ಅಪರಾಧ ಎಸೆಗಿದ್ದಾರೆಂದು ನಂಬುವಂತಹ ವಿಶ್ವಾಸಾರ್ಹ, ದೃಢ ಮತ್ತು ಸಮರ್ಪಕ ಸಾಕ್ಷ್ಯವನ್ನು ಅಭಿಯೋಜನೆ ನೀಡಲು ವಿಫಲವಾಗಿದೆ. ಆದ್ದರಿಂದ ಸೂಕ್ತ ಸಾಕ್ಷ್ಯದಾರರಗಳ ಕೊರತೆ ಇರುವುದರಿಂದ ಆರೋಪಿತರನ್ನು ದೋಷಮುಕ್ತಗೊಳ್ಳಿಸಿ ಬಿಡುಗಡೆಗೊಲಿಸುವುದು ಸಂಮಜಸವೆಂದು ಈ ನ್ಯಾಯಾಲದಲ್ಲಿ ಅಭಿಪ್ರಾಯಕ್ಕೆ ಬರುತ್ತದೆ. ಆದ್ದರಿಂದ ಮೇಲಿನ 1 ರಿಂದ 8 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**31. ಅಂಶ ನಂ. 9** :-ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡತೆ ಆದೇಶಿಸಲಾಗಿದೆ.

:::: **ಆದೇಶ** :::

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರ ಉಪಯೋಗಿಸಿ ಕೊಂಡು 1 ರಿಂದ 8 ನೇ ಆರೋಪಿತರನ್ನು ಭಾ. ದಂ. ಸಂ. ಕಲಂಃ143, 147, 148, 504, 323, 324, 354B ಮತ್ತು 506 ಸಹಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತ ಗೊಳಿಸಿ ಬಿಡುಗಡೆ ಮಾಡಲಾಗಿದೆ.

ಮಾಲು ಪಟ್ಟಿ ಸಂಃ12/2023 (ಪಿ.ಆರ್.ನಂ.03/2024) ಐಟಂ ನಂಃ1 ಸುಮಾರು 03 ಅಡಿ ಉದ್ದದ ಕಬ್ಬಿಣದ ಹಾರೆಕೋಲು ಮೌಲ್ಯವುಳ್ಳ ವಸ್ತುವಾಗಿರುವುದರಿಂದ ಅದನ್ನು ಅಪೀಲು ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಮಾಲು ಪಟ್ಟಿ ಸಂಃ14(A)/2023 (ಪಿ.ಆರ್.ನಂ.03/2024) ಐಟಂ ನಂಃ1, ಒಂದು ಸೀರೆ, ಐಟಂ ನಂಃ2, ಒಂದು ಜಾಕೀಟು ಅಪಮೌಲ್ಯ ವಸ್ತುಗಳಾಗಿರುವುದರಿಂದ ಅವುಗಳನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಆರೋಪಿತರು ಹಾಗೂ ಅವರ ಜಾಮೀನು ದಾರರು ಬರೆದು ಕೊಟ್ಟಿರುವ ಸ್ವಯಂ ಮುಚ್ಚಳಿಕೆ ಹಾಗೂ ಜಾಮೀನು ಮುಚ್ಚಳಿಕೆಗಳು ಆರು ತಿಂಗಳುಗಳ ನಂತರ ರದ್ದುಗೊಳ್ಳ ತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ, ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ ಇಂದು ದಿನಾಂಕ 02 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು).

SHRIDHARA H D
Digitally signed by SHRIDHARA H D
Date: 2026.04.03 19:45:03 +0530

(ಶ್ರೀಧರ ಹೆಚ್ ಡಿ)
ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.

:: **ಅನುಬಂಧ** ::

1) ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು :

ಪ್ರಾಸಾ- 1 :- ಮಹಲಿಂಗಪ್ಪ,

ಪ್ರಾಸಾ- 2 :- ಚೈತ್ರ,

ಪ್ರಾಸಾ- 3 :- ಜಯಮ್ಮ,

ಪ್ರಾಸಾ- 4 :- ಕರೆಪಾತಣ್ಣ,

ಪ್ರಾಸಾ- 5 :- ಯಶೋಧರ,

ಪ್ರಾಸಾ- 6 :- ಈಶ್ವರಮ್ಮ

ಪ್ರಾಸಾ- 7 :- ರೇವಣ್ಣ,

ಪ್ರಾಸಾ- 8 :- ಮಹಲಿಂಗಪ್ಪ,

ಪ್ರಾಸಾ- 9 :- ಎಂ. ಹೆಚ್.

ಪ್ರಾಸಾ– 10 :– ರಾಜಣ್ಣ.

ಪ್ರಾಸಾ– 11 :– ರಾಜು. ಹೆಚ್. ಎಂ.

ಪ್ರಾಸಾ– 12 :– ಡಾಃ ಶ್ರೀಧರ ರೆಡಿ

2) ಅಭಿಯೋಜನೆಯ ಪರ ಗುರುತಿಸಿದ ದಾಖಲೆಗಳು :

ನಿಪಿ–1 :– ದೂರು,

ನಿಪಿ–2 :– ಸ್ಥಳ ಮಹಜರು,

ನಿಪಿ–3 :– ದಂ. ಪ್ರ. ಸಂ. ಕಲಂಃ164(5) ರಡಿಯಲ್ಲಿ ಪ್ರಾಸಾ–2 ರವರ ಹೇಳಿಕೆ,

ನಿಪಿ–4 :– ದಂ. ಪ್ರ. ಸಂ. ಕಲಂಃ164(5) ರಡಿಯಲ್ಲಿ ಪ್ರಾಸಾ–3 ರವರ ಹೇಳಿಕೆ,

ನಿಪಿ–5 :– ಪ್ರಾಸಾ–3 ರವರ ಹೇಳಿಕೆ,

ನಿಪಿ–6 :– ಪ್ರಾಸಾ–4 ರವರ ಹೇಳಿಕೆ,

ನಿಪಿ–7 :– ಸ್ಥಳ ಪಂಚನಾಮೆ,

ನಿಪಿ–8 :– ಪ್ರಾಸಾ–5 ರವರ ಹೇಳಿಕೆ,

ನಿಪಿ–9 :– ಪ್ರಾಸಾ–8 ರವರ ಹೇಳಿಕೆ,

ನಿಪಿ–10 :– ಪಂಚರಿಗೆ ನೀಡಲಾದ ನೋಟೀಸ್,

ನಿಪಿ–11 :– ಸೂಚನಾ ಪತ್ರ,

ನಿಪಿ–12 :– ಪ್ರಥಮ ವರ್ತಮಾನ ವರದಿ,

ನಿಪಿ–13 :– ಪಂಚರಿಗೆ ನೀಡಲಾದ ನೋಟೀಸ್,

ನಿಪಿ–14 :– ಮಾಲು ಪಟ್ಟಿ

ನಿಪಿ–15 :– ಮಾಲು ಪಟ್ಟಿ

ನಿಪಿ- 16 ರಿಂದ :- ಗಾಯದ ಪ್ರಮಾಣ ಪತ್ರಗಳು,
19

3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳು :

ಮು ಮಾ 1 :- ನೀಲಿ ಬಣ್ಣದ ಸೀರೆ,

ಮು ಮಾ 2 :- ಕಂದು ಬಣ್ಣದ ಜಾಕೀಟು,

4) ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳು

-------------ಇರುವುದಿಲ್ಲ--------------

5) ಆರೋಪಿ ಪರ ಗುರುತಿಸಲಾದ ದಾಖಲೆಗಳು

-------------ಇರುವುದಿಲ್ಲ--------------

SHRIDHARA H D
Digitally signed by SHRIDHARA H D
Date: 2026.04.03 19:44:27 +0530

ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.